16.	ಡಿ.ಆರ್. ನರೇಂದ್ರ	"	ಯಲಹಂಕ
17.	ಎಂ.ಎಸ್. ದೇವೀರಮ್ಮ	"	ಯಲಹಂಕ
18.	ಎನ್. ಸುಂದರ್	"	ಬೆಟ್ಟಹಲಸೂರು,
19.	ವಾಣಿ ಆರ್. ಭಟ್	"	ಬೆಟ್ಟಹಲಸೂರು,
20	ಸಿ. ಹನುಮಯ್ಯ	"	ಸೊಂಡೆಕೊಪ್ಪ
21.	ಕೆ.ಎಂ. ಚಿನ್ನಕೇಶವ	"	ಗೋಪಾಲಪುರ
22.	ಕೆ.ಆರ್. ಉಮಾಬಾಯಿ	"	ಕೋಣನಕುಂಟೆ
23.	ಶ್ರೀಧರ್	"	ಕೋಣನಕುಂಟೆ
24.	ಎಸ್. ರಾಮಕೃಷ್ಣ	"	ಸಿಂಗಸಂದ್ರ
25.	ದಿಲೀಪ್ ಬಂಡಾರ್‌ಕರ್	"	ಸಿಂಗಸಂದ್ರ
26.	ಬಿ. ಗಂಗಾಧರಯ್ಯ	"	ಕಗ್ಗಲೀಪುರ
27.	ಎಂ.ವಿ. ಷಣ್ಮುಗ ಸುಂದರಂ	"	ಕೆ.ಗೊಲ್ಲಹಳ್ಳಿ
28.	ಟಿ.ವಿ. ಹರಿಸರ್ವೋತ್ತಮರಾವ್	"	ಬೇಗೂರು
29.	ಕಮಲಮ್ಮ	"	ಬೇಗೂರು
30.	ನರಸಿಂಹಯ್ಯ	"	ವರ್ತೂರು
31.	ಬಿ.ಎಸ್. ರಜನಿ	"	ವರ್ತೂರು
32.	ಕೆ.ಎನ್.ಶ್ರೀ ರಾಮಶೆಟ್ಟಿ	"	ಕೆ.ಆರ್.ಪುರಂ
33.	ಹೆಚ್. ಭಾರತಿ ಬಾಯಿ	"	ಕೆ.ಆರ್.ಪುರಂ
34.	ಸಿ.ಎಸ್. ರವೀಂದ್ರ	"	ಕಾಡುಗೋಡಿ
35.	ಕೆ.ವಿ. ವಿಜಯಲಕ್ಷ್ಮಿ	"	ಕಾಡುಗೋಡಿ
36.	ಜಿ.ಎಸ್. ಬ್ರಹ್ಮರಾಜ್	"	ತಾವರೆಕೆರೆ
37.	ಎಸ್.ಎನ್. ಲೀಲಾವತಿ	"	ಕಾಡುಸೊಣ್ಣಪ್ಪನಹಳ್ಳಿ
38.	ಸುನಿಲ್ ಇಂಚಲ್	"	ಕೆಂಗೇರಿ ಉಪನಗರ

ಆರೋಗ್ಯ ಇಲಾಖೆಯಲ್ಲಿರುವ ವಾಹನಗಳ ಸಂಖ್ಯೆ

431 - ಶ್ರೀ ಕೆ. ಲಕ್ಷ್ಮಣ (ರಾಜಾಜಿನಗರ ಕ್ಷೇತ್ರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಆರೋಗ್ಯ ಇಲಾಖೆಯಲ್ಲಿರುವ ವಾಹನಗಳ ಒಟ್ಟು ಸಂಖ್ಯೆ ಎಷ್ಟು? ಹಾಗೂ ಪ್ರತಿಯೊಂದು ಜಿಲ್ಲೆಗೂ ಅಗತ್ಯಕ್ಕನುಸಾರವಾಗಿ ವಾಹನಗಳು ಒದಗಿಸಲ್ಪಟ್ಟಿವೆಯೆ?

ಆ) ಅವುಗಳಲ್ಲಿ ಎಷ್ಟು ವಾಹನಗಳು ಉಪಯೋಗಿಸುವ ಸ್ಥಿತಿಯಲ್ಲಿದೆ ಮತ್ತು ಎಷ್ಟು ಅನುಪಯೋಗ ಸ್ಥಿತಿಯಲ್ಲಿವೆ?

ಇ) ಅನುಪಯೋಗ ಸ್ಥಿತಿಯಲ್ಲಿರುವ ವಾಹನಗಳು ದುರಸ್ತಿಗಾಗಿ ಬಹಳ ದಿನಗಳಿಂದ ಬೆಂಗಳೂರಿನ ಕೇಂದ್ರ ಕಾರ್ಯಾಗಾರದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ದುರಸ್ತಿಗಾಗಿ ಬರುವ ವಾಹನಗಳನ್ನು ತ್ವರಿತವಾಗಿ ದುರಸ್ತಿಗೊಳಿಸುವ ಬಗ್ಗೆ ಕಾರ್ಯಯೋಜನೆ ಇಲಾಖೆಯಲ್ಲಿ ಇದೆಯೇ? ಪೂರ್ಣ ವಿವರಗಳನ್ನು ನೀಡುವುದು.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲಾಖೆಯಲ್ಲಿ ಒಟ್ಟು 1633 ವಾಹನಗಳಿದ್ದು, ಇವುಗಳನ್ನು ಅಗತ್ಯಕ್ಕನುಸಾರವಾಗಿ ಹಾಗೂ ಕಾರ್ಯಕ್ರಮಗಳಿಗೆ ಅನುಗುಣವಾಗಿ ವಿವಿಧ ಜಿಲ್ಲೆಗಳಿಗೆ ಒದಗಿಸಲಾಗಿದೆ.

ಆ) 1310 ವಾಹನಗಳು ಉಪಯೋಗ ಸ್ಥಿತಿಯಲ್ಲಿದ್ದು ಉಳಿದ 323 ವಾಹನಗಳಲ್ಲಿ ಕೆಲವು ದುರಸ್ಥಿಗಾಗಿ ಹಾಗೂ ಕೆಲವು ಅನುಪಯೋಗ ಸ್ಥಿತಿಯಲ್ಲಿವೆ.

ಇ) ಅನುಪಯೋಗ ಸ್ಥಿತಿಯಲ್ಲಿರುವ ವಾಹನಗಳನ್ನು ನಿಷ್ಕ್ರಿಯಗೊಳಿಸಿ ವಿಲೇವಾರಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಇಲಾಖೆಯ ಕೇಂದ್ರೀಯ ಕಾರ್ಯಾಗಾರದಲ್ಲಿ ವಾಹನ ದುರಸ್ಥಿ ಕಾರ್ಯವನ್ನು ಸರ್ಕಾರದ ನಿಯಮದಂತೆ ವ್ಯವಸ್ಥಿತವಾಗಿ ನಿರ್ವಹಿಸುತ್ತಿದೆ.

ಮುಲ್ಕಿ ಮೀನುಗಾರಿಕಾ ಬಂದರು

543 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ - ಮೀನುಗಾರಿಕಾ ಅಳಿವೆಯ ರಚನೆಯ ಬಗ್ಗೆ ತಜ್ಞರಿಂದ ಪರಿಶೀಲನಾ ಕಾರ್ಯವಾಗಿದೆಯೇ?

ಆ) ಅವರು ಯಾವ ತರಹದ ವರದಿ ಕೊಟ್ಟಿರುವರು.

ಇ) ಆ ಬಂದರಿನ ಕಾರ್ಯ ಯಾವಾಗ ಪ್ರಾರಂಭವಾಗುವುದು

ಈ) ಆ ಕಾರ್ಯಕ್ಕೆ ಒಟ್ಟು ಎಷ್ಟು ಖರ್ಚು ತಗಲುವುದು.

ಉ) ಕೇಂದ್ರದ ಸಹಾಯ ಪಡೆಯುವಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಹೆಜಮಾಡಿ ಕೋಡಿ (ಮುಲ್ಕಿ)ಯನ್ನು ಮೀನುಗಾರಿಕಾ ಬಂದರಾಗಿ ಅಭಿವೃದ್ಧಿ ಪಡಿಸಲು ತಜ್ಞರಿಂದ ಪ್ರಾರಂಭಿಸಿದ ಪರಿಶೀಲನಾ ಕಾರ್ಯ ಮುಗಿದಿದೆ.

ಆ) ಅವರು ಅನುಕೂಲಕರ ವರದಿ ನೀಡಿರುವರು.

ಇ) 1994-95ನೇ ಸಾಲಿನಲ್ಲಿ ಈ ಕಾರ್ಯವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಈ) ಪ್ರಸ್ತುತ ಈ ಕಾರ್ಯಕ್ರಮಕ್ಕೆ ಒಟ್ಟು ರೂ. 100.00 ಲಕ್ಷಗಳ ಖರ್ಚು ತಗಲುವುದೆಂದು ಅಂದಾಜಿಸಲಾಗಿದೆ.

ಉ) ಕೇಂದ್ರ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅವರ ಆದೇಶದ ಮೇರೆಗೆ ಮೀನುಗಾರಿಕೆ ತಂಗುದಾಣ ಇಳಿದಾಣ ನಿರ್ಮಾಣಕ್ಕೆ ಬೇಕಾಗಿರುವ ಜಮೀನನ್ನು ಭೂ ಸ್ವಾಧೀನಪಡಿಸಿ ಕೊಂಡು ಒಂದು ವರದಿಯನ್ನು ಕೇಂದ್ರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

ಹೊಳೇನರಸೀಪುರ ತಾಲ್ಲೂಕಿನಲ್ಲಿ ಕಾಯಿಲೆಯಿಂದ ರಾಸುಗಳು ಸಾಯುತ್ತಿರುವ ಬಗ್ಗೆ.

545 - ಶ್ರೀ ಜಿ.ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?